# ಕಾನು ರಕ್ಷಣೆಗೆ ಕಾರ್ಯತತ್ಪರರಾಗಿ

## ದೇವರ ಕಾಡು ಜಾಗೃತಿ ಕುರಿತ ಕಾರ್ಯಾಗಾರದಲ್ಲಿ ಬ್ಯಾನರ್ಜಿ

ಸಾಗರ: ವೈಜ್ಞಾನಿಕ ದೃಷ್ಟಿಕೋನದ ಪರಿಸರ ಅಧ್ಯಯನದ ವರದಿಗಳನ್ನಾಧರಿಸಿ ಕಾನುಗಳ ಸಂರಕ್ಷಣೆಗೆ ಸರ್ಕಾರ ಮುಂದಾಗಬೇಕು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಪಿ. ಬ್ಯಾನರ್ಜಿ ಹೇಳಿದರು.

ಇಲ್ಲಿನ ವರದಶ್ರೀಯ ಮಲೆನಾಡು ಸಿರಿ ಸಭಾಂಗಣದಲ್ಲಿ ಶೆಡ್ತಿಕೆರೆ ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ, ವೃಕ್ಷಲಕ್ಷ ಆಂದೋಲನ, ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರ ಹಾಗೂ ಭೀಮನಕೋಣೆಯ ಗ್ರಾಮ ಅರಣ್ಯ ಸಮಿತಿ ವತಿಯಿಂದ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ದೇವರ ಕಾಡುಗಳ ಕುರಿತು ಜಾಗೃತಿ ಕಾರ್ಯಾಗಾರದಲ್ಲಿ ವರದಾನದಿ ಜಲಾನಯನ ಪರಿಸರ ಪರಿಸ್ಥಿತಿಯ ಅಧ್ಯಯನ ವರದಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

**ವಾರ್ಷಿಕ ₹ 4 ಕೋಟಿ:** ಕಾನು ರಕ್ಷಣೆಗಾಗಿ ವಾರ್ಷಿಕ ₹ 4 ಕೋಟಿ ವ್ಯಯಿಸಲಾಗುತ್ತದೆ. ಸುಮಾರು 225 ಕಿ.ಮಿ.ವ್ಯಾಪ್ತಿ ಕಂದಕ ಹೊಡೆದು ಕಾನು ರಕ್ಷಣೆಗೆ ಕ್ರಮ ತೆಗೆದುಕೊಳ್ಳಲಾಗಿದೆ. ಪುನಶ್ಚೇತನ ಕಾರ್ಯಕ್ರಮಗಳ ಮೂಲಕ ಗ್ರಾಮ ಅರಣ್ಯ ಸಮಿತಿಗೆ ಶಕ್ತಿ ತುಂಬಬೇಕಾಗಿದೆ ಎಂದು ಹೇಳಿದರು.

ಪಶ್ಚಿಮಘಟ್ಟ ಅಭಿವೃದ್ಧಿ ಕಾರ್ಯಪಡೆ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಮಾತನಾಡಿ, ಗ್ರಾಮ ಅರಣ್ಯ ಸಮಿತಿ, ಸಂಘಸಂಸ್ಥೆಗಳು ಭೂಮಿ, ಅರಣ್ಯ, ಗೋಮಾಳಗಳ ಸಂರಕ್ಷಣೆಗಾಗಿ ಸರ್ಕಾರದ



ಸಾಗರದಲ್ಲಿ ನಡೆದ ದೇವರ ಕಾಡುಗಳ ಕುರಿತು ಜಾಗೃತಿ ಕಾರ್ಯಾಗಾರದಲ್ಲಿ ವರದಾನದಿ ಜಲಾನಯನ ಪರಿಸರ ಪರಿಸ್ಥಿತಿಯ ಅಧ್ಯಯನ ವರದಿ ಬಿಡುಗಡೆ.

ಮನವೊಲಿಸಬೇಕು. ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸ್ಥಿತಿ ಗಂಭೀರವಾಗುತ್ತಿದೆ. ದೇವರ ಕಾಡುಗಳ ಯೋಜನೆ ಮುಂದುವರಿಸಲು ಗ್ರಾಮ ಅರಣ್ಯ ಸಮಿತಿ ಗಟ್ಟಿಯಾಗಿ ಧ್ವನಿಯೆತ್ತಬೇಕು. ಸಾಗರ, ಸೊರಬ ತಾಲೂಕುಗಳಲ್ಲಿನ ಪ್ರಾಣಿಗಳ ಉಪಟಳ ಸಮಸ್ಯೆಗೆ ಪರಿಹಾರದ ಒತ್ತಡ ಹೇರಬೇಕು. ಅರಣ್ಯಭೂಮಿ ಸಂಬಂಧದಲ್ಲಿ ಸರ್ಕಾರದ ಹೊಸ ಯೋಜನೆ ಅಗತ್ಯ ಎಂದರು.

ನದಿ ಕಲುಷಿತ: ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಮಾಜಿ ಅಧ್ಯಕ್ಷ, ಪರಿಸರ ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರ, ಮಾತನಾಡಿ, ಚರಂಡಿ ಕಲ್ಮಶದಿಂದ ವರದಾ ನದಿ ಕಲುಷಿತವಾಗುತ್ತಿದೆ. ಅತಿಕ್ರಮಣ ಹಾಗೂ ಸವಕಳಿಯಿಂದ ಅಂತರ್ಜಲ ಮಟ್ಟ ಕಡಿಮೆಯಾಗಿದೆ. ವರದಾ ಜಲಾನಯನದಲ್ಲಿ 1973ರಲ್ಲಿ ಶೇ. 45 ಅರಣ್ಯ ಸಂಪತ್ತು ಇತ್ತು, 2013ರಲ್ಲಿ ಶೇ. 33 ಅರಣ್ಯ ಇದೆ. ಏಕ ಜಾತಿ ಅರಣ್ಯ ನೆಡುತೋಪುಗಳಿಂದಾಗಿ ಭೂಸವಕಳಿ ಹೆಚ್ಚಾಗಿದೆ ಎಂದರು.

ಪರಿಸರ ಚಿಂತಕ ಪ್ರೊ. ಬಿ.ಎಂ. ಕುಮಾರಸ್ವಾಮಿ ಮಾತನಾಡಿ, ಜಾಗತಿಕ ಪರಿಸರದ ಪರಿಸ್ಥಿತಿ ಬಹಳ ಸೂಕ್ಷ್ಮತೆ ಪಡೆದುಕೊಂಡಿದೆ. ಕಳೆದ 800 ವರ್ಷಗಳಿಗಿಂತಲೂ ಕಳೆದ 200 ವರ್ಷಗಳಲ್ಲಿ ಹೆಚ್ಚು ಪಾಲು ಉಷ್ಣವರ್ಧಕ ಅನಿಲಗಳನ್ನು ತುಂಬಿದ್ದೇವೆ. ಅಭಿವೃದ್ಧಿಯ ಹಾಹಾಕಾರದಿಂದ ಪರಿಸರ ಸರ್ವನಾಶದ

- ವರದಾನದಿ ಜಲಾನಯನ ಪರಿಸರ ಪರಿಸ್ಥಿತಿಯ ಅಧ್ಯಯನ ವರದಿ ಬಿಡುಗಡೆ
- ಸಾಗರ, ಸೊರಬ ತಾಲೂಕುಗಳಲ್ಲಿನ ಪ್ರಾಣಿಗಳ ಉಪಟಳ ಸಮಸ್ಯೆಗೆ ಪರಿಹಾರದ ಒತ್ತಡ ಹೇರಿ

ಅಂಚಿನಲ್ಲಿದೆ. ಮೋದಿ ಸರ್ಕಾರ ಸಹ ಪರಿಸರಕ್ಕಿಂತಲೂ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದೆ. ಪರಿಸರ ಸಂಘಟನೆಗಳೊಂದಿಗೆ ಚರ್ಚೆ ಮಾಡದೇ ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಇಲಾಖೆ ಪ್ರಮುಖವಾದ 6 ಪರಿಸರ ಸಂಬಂಧಿತ ಕಾಯ್ದೆಗಳನ್ನು ತಿದ್ದುಪಡಿ ಮಾಡಲು ಮುಂದಾಗಿದೆ. ಇಂತಹ ಅಭಿವೃದ್ಧಿ ನಿಜವಾದ ಅಭಿವೃದ್ಧಿಯಲ್ಲ; ಬದಲಿಗೆ ಸಾಮೂಹಿಕ ಆತ್ಮಹತ್ಯೆ ಎಂಬುದನ್ನು ಕಿವುಡು ಸರ್ಕಾರಕ್ಕೆ ಹೇಳಲು ಹೋರಾಟ ಅಗತ್ಯ.

ಇಂತಹ ಕಿರು ಅಧ್ಯಯನಗಳು ಸ್ಥಳೀಯ ಹೋರಾಟಕ್ಕೆ ಅಗತ್ಯ ಪ್ರಭಾವ ಒದಗಿಸಲಿ ಎಂದರು. ಭೀಮನಕೋಣೆಯ ಗ್ರಾಮ ಅರಣ್ಯ ಸಮಿತಿಯ ಬಿ.ಎಚ್. ರಾಘವೇಂದ್ರ ಅಧ್ಯಕ್ಷತೆ ವಹಿಸಿದ್ದರು. ಕವಲಕೋಡು ವೆಂಕಟೇಶ ಸ್ವಾಗತಿಸಿ ನಿರ್ವಹಿಸಿದರು.